**<u>ಎಫ್.ಡಿ.ಪಿ ನಂ. 02/2005</u>**
**<u>ಆರ್ .ಡಬ್ಲ್ಯೂ-1</u>**

**<u>(ಇಂದು ದಿನಾಂಕಃ 23-01-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)</u>**

<u>ಮುಂದುವರೆದ ಪಾಟೀ ಸವಾಲು : ಅರ್ಜಿದಾರ ಪರ ವಕೀಲರಿಂದಃ</u>

ನನ್ನ ಅಜ್ಜರವರ ಹೆಸರು ಲಗಮಪ್ಪ ಭೀಮಣ್ಣ ಗಸ್ತಿ ಆಗಿರುತ್ತದೆ ಎಂದರೆ ಸರಿ. ನಿಮ್ಮ ಅಜ್ಜರವರಿಗೆ ನಿಮ್ಮ ತಂದೆ ಅರಬಣ್ಣ ಹಾಗೂ ನಿಮ್ಮ ದೊಡ್ಡಪ್ಪ ಭೀಮಪ್ಪ ಆಗಿರುತ್ತಾರೆ ಎಂದರೆ ಸಾಕ್ಷಿಯು ಕೇವಲ ನಮ್ಮ ತಂದೆಯವರು ಮಾತ್ರ ಅವರ ಮಗ ಆಗಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ನನ್ನ ದೊಡ್ಡಪ್ಪ ಭೀಮಪ್ಪ ರವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನನ್ನ ಅಜ್ಜನಿಗೆ ಕೇವಲ ನನ್ನ ತಂದೆ ಮಾತ್ರ ಮಗ ಆಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಹಿರಿಯರ ಆಸ್ತಿಗಳು ಆಗಿರುತ್ತವೆ ಎಂದರೆ ಸರಿ. ನಮ್ಮ ಅಜ್ಜ ಮೃತಪಟ್ಟ ನಂತರ ವಾರಸಾ ಪ್ರಕಾರ ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪರವರ ಹೆಸರು ದಾವಾ ಆಸ್ತಿಗಳಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಕೇವಲ ನಮ್ಮ ತಂದೆಯವರ ಹೆಸರು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು ಆ ಪ್ರಕಾರ ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ.

ನಿಮ್ಮ ದೊಡ್ಡಪ್ಪನ ಹೆಂಡತಿ ಪಾರವ್ವಾ ಗಸ್ತಿ ಆಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಭೀಮಪ್ಪ ಮತ್ತು ಪಾರವ್ವಾರವರಿಗೆ ಮಕ್ಕಳು ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಷಯ ಎಲ್ಲಾ ಗೊತ್ತಿದ್ದರೂ ಕೂಡಾ ಭೀಮಪ್ಪ ರವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರಕರಣವು ಚಾಲ್ತಿಯಲ್ಲಿ ಇದ್ದಾಗ ದಿಃ 30-06-2022 ರಂದು ನಮ್ಮ ತಂದೆಯವರು ದಾವಾ ಆಸ್ತಿಗೆ ಸಂಬಂಧಿಸಿದ 24 ಗುಂಟೆ ಜಮೀನವನ್ನು ಮಹಾಲಿಂಗ ಕಾಡಪ್ಪ ಶಿಗಿಹೋಳಿ ರವರಿಗೆ ಕ್ರಯ ಪ್ರಕಾರ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 30-06-2010 ರಂದು ನಾನು ನಮ್ಮ ತಂದೆಯವರು ಮೃತಪಟ್ಟ ನಂತರ ಸರ್ವೇ ನಂ.599 ಜಮೀನವನ್ನು ಬಾಹುಬಲಿ ನಿಂಗಪ್ಪ ಚೌಗಲಾ ಎನ್ನುವವರಿಗೆ ಕ್ರಯ ಪ್ರಕಾರ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮಗೆ ಹಣದ ಅಡಚಣೆ ಇದ್ದ ಕಾರಣ ಸದರಿ ಹೊಲವನ್ನು

ನೊಂದ ಮಾಡಿ ಕೊಟ್ಟಿದ್ದೆವು ನಾನು ಪುನಃ ಹಣವನ್ನು ಮರುಪಾವತಿ ಮಾಡಿದ ನಂತರ ಸದರಿ ಜಮೀನವನ್ನು ಬಿಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ.ಅದೇ ರೀತಿ ದಿಃ 09-01-2014 ರಂದು ನಾನು ಸರ್ವೇ ನಂ.599 ನೇದ್ದರಲ್ಲಿ 1 ಎಕರೆ ಜಮೀನವನ್ನು ವಿನೋದ ಗೋವಿಂದಪ್ಪ ಕರನಿಂಗ ರವರಿಗೆ ಕ್ರಯ ಪ್ರಕಾರ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿಃ 05-05-2014 ರಂದು ನಾನು ಸದರಿ ಸರ್ವೇ ನಂ.599 ಜಮೀನಿನ 30 ಗುಂಟೆ ಜಮೀನನ್ನು ಮಣ್ಣಪ್ಪ ರಾಮಪ್ಪ ದೊಡ್ಡಣ್ಣವರ ರವರಿಗೆ ಕ್ರಯ ಪ್ರಕಾರ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ದಿಃ 20-04-2018 ರಂದು ನಾನು ಸರ್ವೇ ನಂ.599 ಜಮೀನಿನ 22 ಗುಂಟೆ ಜಮೀನನ್ನು ಶಂಕರ ವಿರಭದ್ರಪ್ಪ ಕೋಣಿ ರವರಿಗೆ ಕ್ರಯ ಪ್ರಕಾರ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ.  ಸಾಕ್ಷಿಯು ಮುಂದುವರೆದು ನನಗೆ ಹಣದ ಅಡಚಣೆ ಇದ್ದ ಕಾರಣ ಅವರಿಗೆ ನೊಂದ ಮಾಡಿ ಕೊಟ್ಟಿದ್ದೆ ಆನಂತರ ಹಣವನ್ನು ಮರುಪಾವತಿ ಮಾಡಿ ಜಮೀನವನ್ನು ಬಿಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಅದೇ ರೀತಿ ದಿಃ 10-06-2022 ರಂದು ನಾನು ಸರ್ವೇ ನಂ.599 ಜಮೀನಿನ 24 ಗುಂಟೆ ಜಮೀನವನ್ನು ಮಹಾಲಿಂಗ ಕಾಡಪ್ಪ ಶಿಗಿಹೋಳಿ ರವರಿಗೆ ಕ್ರಯ ಪ್ರಕಾರ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾರಾರಿಂದ ಹಣವನ್ನು ಪಡೆದುಕೊಂಡಿರುತ್ತೇನೊ ಅವರ ಹೆಸರುಗಳು ಎನಕಂಬರನ್ಸ ದಾಖಲಾತಿಯಲ್ಲಿ ಬಂದಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನಾನು ಅವರಿಂದ ಹಣವನ್ನು ಪಡೆದುಕೊಂಡು ಉಪನೊಂದಣಾಧಿಕಾರಿಯವರ ಕಚೇರಿಯಲ್ಲಿ ಅವರಿಗೆ ಜಮೀನವನ್ನು ನೊಂದು ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿ. ಆಗ ಸದರಿ ಕಚೇರಿಯಲ್ಲಿ ಕೊಡುವವರ ಸಹಿ ಹಾಗೂ ಪಡೆದುಕೊಳ್ಳುವವರ ಸಹಿ ಕೂಡಾ ತೆಗೆದುಕೊಂಡು ಭಾವಚಿತ್ರವನ್ನು ಕೂಡಾ ಡೆದುಕೊಳ್ಳುತ್ತಾರೆ ಎಂದರೆ ಸರಿ. ಆ ಪ್ರಕಾರ ಎನಕಂಬರನ್ಸದಲ್ಲಿ ರೆಕಾರ್ಡ ಬರುತ್ತದೆ ಎಂದರೆ ಸರಿ.  ನನ್ನ ದೊಡ್ಡಪ್ಪ ಭೀಮಪ್ಪಗೆ ಹಾಗೂ ಅವರ ಹೆಂಡತಿ ಪಾರವ್ವ ರವರಿಗೆ ಮಕ್ಕಳು ಆಗದೇ ಇದ್ದ ಕಾರಣ ಅವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಎಫ್.ಡಿ.ಪಿ ನಂ. **02/2005**</u>
<u>ಆರ್ .ಡಬ್ಲ್ಯೂ-**1**</u>

ನಮ್ಮ ತಂದೆ ಅರಬಣ್ಣ ಲಗಮಪ್ಪ ಗಸ್ತಿ ರವರಿಗೆ 4 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಅವರ ಹೆಸರುಗಳು ಸಿದ್ದಪ್ಪ, ಕಲ್ಲಪ್ಪ, ಕಾಡಪ್ಪ ಹಾಗೂ 4 ನೇ ದವರು ನಾನು ಆಗಿರುತ್ತೇನೆ ಎಂದರೆ ಸರಿ. ನಮ್ಮ ತಂದೆಯವರು ಮೃತಪಟ್ಟ ನಂತರ ನನಗೆ ಹಾಗೂ ನನ್ನ ಸಹೋದರರಿಗೆ ಸಮಾಯಕವಾಗಿ ಪಾಲು ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ಲಗಮಪ್ಪ ಭೀಮಪ್ಪ ಗಸ್ತಿ ರವರು ಮೃತಪಟ್ಟ ನಂತರ ಅವರ ಮಕ್ಕಳಿಗೂ ಕೂಡಾ ಸಮಾಯಕವಾಗಿ ಪಾಲು ಬಂದಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಅಜ್ಜ ರವರು ಮೃತಪಟ್ಟ ನಂತರ ನನ್ನ ತಂದೆ ಅರಭಣ್ಣ ಹಾಗೂ ನನ್ನ ದೊಡ್ಡಪ್ಪ ಭೀಮಪ್ಪ ರವರ ಹೆಸರುಗಳು ವಾರಸಾ ಪ್ರಕಾರ ಉತಾರಗಳಲ್ಲಿ ಹೆಸರುಗಳು ಬಂದಿರುತ್ತವೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಭೀಮಪ್ಪ ರವರು ಮೃತಪಟ್ಟ ನಂತರ ಅವರ ಹೆಂಡತಿ ಪಾರವ್ವ ರವರಿಗೆ ಕೂಡಾ ವಯಸ್ಸಾದ ಕಾರಣ ಸದರಿ ಅವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಅವರು ಗೊತ್ತಿರುವುದಿಲ್ಲ ಎಂದು ಸುಳ್ಳ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

(Smt. Surya Prabha H.D)
Addl. CJ & JMFC, Gokak